## ತ್ರಿಶಂಕು ಸ್ವರ್ಗದಲ್ಲಿ ಸುನಿ-ಶರಣ್





ಸಿಂಪಲ್ ಕಥೆಗಳನ್ನೇ ಡಿಫರೆಂಟಾಗಿ ಹೇಳುತ್ತ, ಕಂಕುಳಲ್ಲಿ ಕಚಗುಳಿಯಿಟ್ಟಂತೆ ಪ್ರೇಕ್ಷಕರನ್ನು ನಗಿಸುತ್ತಲೇ ಸಿನಿಮಾ ಗೆಲ್ಲಿಸಿಕೊಳ್ಳುವ ಚಾಕಚಕ್ಯತೆ ಗೊತ್ತಿರುವ ನಿರ್ದೇಶಕ ಸಿಂಪಲ್ ಸುನಿ. ಆವರೇಜ್ ಬಜೆಟ್‌ನಲ್ಲಿ ಸಿನಿಮಾ ಮಾಡಿ ಬಂಡವಾಳದ ಮೇಲೆ ಒಂದಿಷ್ಟು ಲಾಭ ಮಾಡಿಕೊಳ್ಳುವ ಕಲೆ ಅವರಿಗೆ ಸಿದ್ಧಿಸಿದೆ ಎನ್ನುವುದಕ್ಕೆ 'ಆಪರೇಷನ್ ಅಲವೇಲಮ್ಮ', 'ಚಮಕ್' ಸಿನಿಮಾಗಳೇ ಸಾಕ್ಷಿ. ಅವರ ಹೊಸ ಸಿನಿಮಾ 'ಬಜಾರ್' ಬಿಡುಗಡೆಗೆ ಸಜ್ಜಾಗಿದೆ.

ಖಾಲಿ ಕೂಡುವುದು ಸುನಿ ಜಾಯಮಾನವೇ ಅಲ್ಲ. ಒಂದರ ಹಿಂದೊಂದರಂತೆ ಸಿನಿಮಾ ಮಾಡುತ್ತಲೇ ಇರುವ ಅವರು ಇದೀಗ ನಟ ಶರಣ್ ಇಟ್ಟುಕೊಂಡು ಮತ್ತೊಂದು ಸಿನಿಮಾ ಮಾಡಲು ಹೊರಟಿದ್ದಾರೆ. ಇದಕ್ಕೆ ಹಣ ಹೂಡುತ್ತಿರುವವರು ಪುಷ್ಕರ್ ಮಲ್ಲಿಕಾರ್ಜುನಯ್ಯ. ಸುನಿಯ ನಗೆಯುಕ್ಕಿಸುವ ಚುರುಕು ಸಂಭಾಷಣೆ ಮತ್ತು ಶರಣ್ ಅವರ ಹಾಸ್ಯಪ್ರಜ್ಞೆ, ಎರಡೂ ಸೇರಿದರೆ ಮನರಂಜನೆಯ ಹೊಸ ಪ್ಯಾಕೇಜ್ ಸಿದ್ಧವಾಗುವುದು ಖಚಿತ. 'ಇದು ಒಂದೊಂದು ಫ್ರೇಮ್‌ನಲ್ಲಿಯೂ ಪ್ರೇಕ್ಷಕರಿಗೆ ಮನರಂಜನೆ ರಸದೌತಣ ಉಣಿಸುವ ಸಿನಿಮಾ' ಎಂದು ತಂಡವೇ ಹೇಳಿಕೊಂಡಿದೆ.

ಸದ್ಯಕ್ಕೆ ಶರಣ್, 'ಅಮೆರಿಕದಲ್ಲಿ ಅಧ್ಯಕ್ಷ' ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. ಅದು ಮುಗಿದ ಮೇಲೆ ಸುನಿ ಸಿನಿಮಾದಲ್ಲಿ ತೊಡಗಿಕೊಳ್ಳಲಿದ್ದಾರೆ. ಜನವರಿ 16ಕ್ಕೆ ಚಿತ್ರದ ಮುಹೂರ್ತ ಇಟ್ಟುಕೊಳ್ಳಲಾಗಿದೆ.

ಈ ಸಲ ತ್ರಿಶಂಕು ಸ್ವರ್ಗದ ಕಲ್ಪನೆಯ ಎಳೆ ಇಟ್ಟುಕೊಂಡು ಕಥೆ ಹೆಣೆದಿದ್ದಾರಂತೆ ಸುನಿ. ತ್ರಿಶಂಕು ಸ್ವರ್ಗದ ಅಪ್ಸರೆಯ ಆಯ್ಕೆ ಇನ್ನೂ ಆಗಿಲ್ಲ. ಹೊಸ ಮುಖಕ್ಕಾಗಿ ಹುಡುಕುತ್ತಿರುವ ತಂಡ, ಆಡಿಷನ್ ಮೂಲಕವೇ ನಾಯಕಿಯನ್ನು ಆಯ್ದುಕೊಳ್ಳಲು ನಿರ್ಧರಿಸಿದೆ. ಜನವರಿ 22ಕ್ಕೆ ಚಿತ್ರೀಕರಣ ಆರಂಭಿಸುವ ಯೋಜನೆಯನ್ನೂ ತಂಡ ಹಾಕಿಕೊಂಡಿದೆ.

## ಇದು ಸಿನಿಮಾ ಬದನೇಕಾಯಿ!





'ರಾಜಮೌಳಿ ಬಿಲ್ಡಪ್ ಕೊಟ್ರೆ ಹೋ ಅಂತ ಎಲ್ಲರೂ ಕುಣಿತಾರೆ. ಆದರೆ ನಾನೋ, ಪ್ರೇಮೋ ಬಿಲ್ಡಪ್ ಮಾಡಿದರೆ ಗಿಮಿಕ್ ಸ್ಟಾರ್ ಅಂತ ಹೇಳಿ ವ್ಯಂಗ್ಯ ಮಾಡ್ತೀರಾ' – ಹೀಗೆ ತುಸು ಸಿಟ್ಟಿನಿಂದಲೇ ಪತ್ರಕರ್ತರನ್ನು ತರಾಟೆಗೆ ತೆಗೆದುಕೊಂಡವರು ನಿರ್ದೇಶಕ ಆರ್. ಚಂದ್ರು. ಅದು ಉಪೇಂದ್ರ ಅಭಿನಯದ, ಚಂದ್ರು ನಿರ್ದೇಶಿಸುತ್ತಿರುವ 'ಐ ಲವ್ ಯೂ' ಚಿತ್ರದ ಫಸ್ಟ್ ಲುಕ್ ಬಿಡುಗಡೆಯ ಪತ್ರಿಕಾಗೋಷ್ಠಿ. ಈ ಘಟನೆ ನಡೆದು ಕೆಲವು ತಿಂಗಳು ಕಳೆದಿವೆ. ಚಂದ್ರು ಫಸ್ಟ್ ಲುಕ್ ಹಂತ ದಾಟಿ ಇತ್ತೀಚೆಗಷ್ಟೇ ಟ್ರೇಲರ್ ಬಿಡುಗಡೆ ಮಾಡಿದ್ದಾರೆ.

ಸಾಮಾನ್ಯವಾಗಿ ಟೀಸರ್, ಟ್ರೇಲರ್ ಎಲ್ಲವನ್ನೂ ಸಿನಿಮಾದ ಕುರಿತು ಕುತೂಹಲ ಮೂಡಿಸಲು ಬಿಡುಗಡೆ ಮಾಡಲಾಗುತ್ತಾರೆ. ಆದರೆ ಚಂದ್ರು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಈ ಟ್ರೇಲರ್ ನೋಡಿದರೆ ನಿಮಗೆ ಸಿನಿಮಾ ಕುರಿತು ಇರುವ ಕುತೂಹಲವೆಲ್ಲ ಕರಗಿಹೋಗುತ್ತದೆ. ಬಾಹುಬಲಿ ಮೊದಲ ಭಾಗ ನೋಡಿದ ಹಲವರು 'ಎರಡನೇ ಭಾಗಕ್ಕೆ ಮಾಡಿದ ಸುದೀರ್ಘ ಟ್ರೇಲರ್ ಇದ್ದಂಗಿದೆ' ಎಂದು ಲೇವಡಿ ಮಾಡಿದ್ದರು. ಆದರೆ ಚಂದ್ರು ಸಿನಿಮಾ ಟ್ರೇಲರ್ ನೋಡಿದ ಹಲವರು 'ಟ್ರೇಲರಲ್ಲಿ ಇಡೀ ಸಿನಿಮಾವೇ ಇದ್ದಂಗಿದೆಯಲ್ಲ' ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಂತೂ ಒಬ್ಬರು 'ಐ ಲವ್ ಯೂ ಚಿತ್ರದ ಟ್ರೇಲರ್ ಇನ್ನೂ ಸ್ವಲ್ಪ ದೀರ್ಘವಾಗಿದ್ದರೆ ಮಧ್ಯಂತರ ಬಂದುಬಿಡ್ತಿತ್ತು' ಎಂದು ಗಾಬರಿಯಿಂದ ಹೇಳಿದ್ದಾರೆ.

ಅಂಥದ್ದೇನಿದೆ ಟ್ರೇಲರ್‌ನಲ್ಲಿ? ಉಪೇಂದ್ರ ಅವರ 'ಎ' ಸಿನಿಮಾವನ್ನು ರೀಮೇಕ್ ಮಾಡುತ್ತಿದ್ದಾರೆಯೇ ಎಂದು ಅನಿಸುವ ಹಾಗಿದೆ ಟ್ರೇಲರ್. ಸ್ವೇಟಸ್ಸು, ಪ್ರೇಮ–ಕಾಮ ಕುರಿತು ಓತಪ್ರೋತವಾಗಿ ಹರಿಬಿಡುವ ನಾಯಕನ ಡೈಲಾಗ್‌ಗಳು ಅವವೇ ಹಳಸಲು ಹುಚ್ಚಾಟವನ್ನು ನೆನಪಿಸುವ ಹಾಗಿದೆ. 'ಪ್ರೀತಿ ಪ್ರೇಮ ಎಲ್ಲ ಪುಸ್ತಕದ ಬದನೇಕಾಯಿ' ಎಂಬ ಡೈಲಾಗ್ ಅನ್ನು ಇಲ್ಲಿ ನಾಯಕಿಯ ಬಾಯಿಂದ ಹೇಳಿಸಲಾಗಿದೆ. ಜತೆಗೆ ಗಂಡಸ್ತನದ ಅತಿಭಯಂಕರ ವ್ಯಾಖ್ಯಾನವೂ ಇದೆ. ನಾಯಕಿ ಹೇಳುವ ಮಾತುಗಳನ್ನೇ ಈ ಟ್ರೇಲರ್‌ಗೆ ಅನ್ವಯಿಸಿ ತುಸು ಬದಲಾಯಿಸಿ ಹೇಳುವುದಾದರೆ ಇದು ಸಿನಿಮಾ ಬದನೇಕಾಯಿ ಎನ್ನಬಹುದು!